SEPTEMBER 22, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಪಶ್ಚಿಮಘಟ್ಟ ಸಂರಕ್ಷಣೆ;** ರಾಜ್ಯ ಸರ್ಕಾರದಿಂದ, ಸಮಗ್ರ ನೀಲನಕ್ಷೆ – ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ.
- **ಆಲಮಟ್ಟಿಯ, ಶ್ರೀ ಲಾಲಬಹಾದ್ದೂರ ಶಾಸ್ತ್ರಿ** ಜಲಸಂಗ್ರಹಾಗಾರ; ಕೃಷ್ಣ ಮೇಲ್ದಂಡೆ ಯೋಜನೆ, ಮುಳುಗಡೆ ಸಂತ್ರಸ್ತರ ಹಿತರಕ್ಷಣೆಗೆ, ಸರ್ಕಾರ ಬದ್ಧ – ಸಚಿವ ಎನ್. ಚಲುವರಾಯಸ್ವಾಮಿ.
- **ವ್ಯಾಪಾರ ವಹಿವಾಟು** ಸುಗಮಗೊಳಿಸಿದ, ಕೇಂದ್ರದ ಜಿ.ಎಸ್.ಟಿ ನೀತಿ ಹಾಗೂ ಡಿಜಿಟಲ್ ಪಾವತಿ, ವ್ಯವಸ್ಥೆ.
- **ಹಿರಿಯ ನಟ, ಅನಂತನಾಗ ಅವರಿಗೆ,** ರಾಷ್ಟ್ರಪತಿಯವರಿಂದ ಇಂದು, ದಾದಾಸಾಹೇಬ ಫಾಲ್ಕೆ ಪುರಸ್ಕಾರ, ಪ್ರದಾನ.

<><><>

**ಈಗ ವಾರ್ತೆಗಳ ವಿವರ**

<><><>

**ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದ,** ಡಾಕ್ಟರ್ ಕೆ. ಕಸ್ತೂರಿರಂಗನ್ ವರದಿ, ರಾಜ್ಯದ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳ, ಕೃಷಿಕರು, ತೋಟಿಗರು, ಬುಡಕಟ್ಟು ಸಮುದಾಯಗಳು ಹಾಗೂ ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಆತಂಕ ಮೂಡಿಸಿದ್ದು, ರಾಜ್ಯ ಸರ್ಕಾರ, ಪಶ್ಚಿಮಘಟ್ಟಗಳು, ಅಲ್ಲಿನ ಜೀವವೈವಿಧ್ಯ ಹಾಗೂ ಸ್ಥಳೀಯ ವಾಸ್ತವಾಂಶ ಗೌರವಿಸುವ ನಿಟ್ಟಿನಲ್ಲಿ, ಸಮಗ್ರ ನೀಲನಕ್ಷೆ ಪ್ರಸ್ತಾಪಿಸಲಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಧಾನಸಭೆಗೆ ತಿಳಿಸಿದ್ದಾರೆ. ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನ ನಿನ್ನೆ ಆರಂಭಗೊಂಡಿದ್ದು, ಕೇಂದ್ರ ಸರ್ಕಾರ ಪಶ್ಚಿಮಘಟ್ಟಗಳ ಸಂರಕ್ಷಣೆ ಕುರಿತಾಗಿ ಹೊರಡಿಸಿದ, 7ನೇ ಕರಡು ಅಧಿಸೂಚನೆ, ರಾಜ್ಯದ ಬರಗಾಲದ ಬಗ್ಗೆ, ಇಂದು ಮತ್ತು ನಾಳೆ ಸಹ ವಿಸ್ತೃತ ಚರ್ಚೆ ನಡೆಯಲಿದೆ. ವಿಧಾನಸಭೆ ವಿಪಕ್ಷ ನಾಯಕ, ಆರ್. ಅಶೋಕ ಮಾತನಾಡಿ, ಡಾಕ್ಟರ್ ಕೆ.ಕಸ್ತೂರಿರಂಗನ್ ವರದಿ ಬಗ್ಗೆ, ಒಟ್ಟಾಗಿ ಚರ್ಚಿಸಿ, ಒಮ್ಮತದ ನಿರ್ಧಾರ ಕೈಗೊಂಡು, ಕೇಂದ್ರ ಸರ್ಕಾರಕ್ಕೆ ರಾಜ್ಯದ ನಿಲುವನ್ನು ತಿಳಿಸೋಣ, ಎಂದರು. ಡಾಕ್ಟರ್ ಕೆ. ಕಸ್ತೂರಿರಂಗನ್ ವರದಿ, ಸ್ಯಾಟ್‌ಲೈಟ್ ಚಿತ್ರಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಆದರೆ ಮಲೆನಾಡಿನ ವಾಸ್ತವ ಪರಿಸ್ಥಿತಿ ಹಾಗೂ ಸ್ಥಳೀಯ ಜನರ ಬದುಕನ್ನು ಸಮಗ್ರವಾಗಿ ಅರಿಯಲು, ಭೌತಿಕ

ಸಮೀಕ್ಷೆ ಅಗತ್ಯ ಎಂದು, ಉಪಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

<><><>

**ಖ್ಯಾತ ವಿಜ್ಞಾನಿ ಡಾಕ್ಟರ್ ಕೆ.ಕಸ್ತೂರಿರಂಗನ್** ವರದಿಯಲ್ಲಿ, ರಾಜ್ಯದ ಪಶ್ಚಿಮಘಟ್ಟ ವ್ಯಾಪ್ತಿಯ, ಅಂದಾಜು, 20 ಸಾವಿರದ 668 ಚದರ ಕಿಲೋಮೀಟರ್ ಭೂಭಾಗವನ್ನು, ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಸೇರಿಸಲು ಪ್ರಸ್ತಾಪಿಸಲಾಗಿದೆ ಎಂದು, ಅರಣ್ಯ ಖಾತೆ ಸಚಿವ ರಾಮಲಿಂಗಾರೆಡ್ಡಿ, ವಿಧಾನಸಭೆ ಕಲಾಪದಲ್ಲಿ ತಿಳಿಸಿದ್ದಾರೆ. ರಾಜ್ಯದ 10 ಜಿಲ್ಲೆಗಳ, ಸಾವಿರದ 449 ಗ್ರಾಮಗಳು, ಈ ನಿರ್ಧಾರದಿಂದ ಬಾಧಿತವಾಗಲಿವೆ. ಅಕ್ರಮ ಗಣಿಗಾರಿಕೆ, ಅಕ್ರಮ ಮರಳು ಗಣಿಗಾರಿಕೆ, ಮಿತಿಮೀರಿದ ಗುಡ್ಡಕಡಿತ, ಒತ್ತುವರಿ ಬಗ್ಗೆ, ಗಂಭೀರ ಕ್ರಮದ ಅವಶ್ಯಕತೆ ಇದೆ, ಎಂದರು.

<><><>

**ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ**, ಗಡಿ ಹಂಚಿಕೊಂಡಿರುವ, ಬಾಗಲಕೋಟೆ ಜಿಲ್ಲೆ, ಆಲಮಟ್ಟಿಯ, ಕೃಷ್ಣ ನದಿ ಮೇಲ್ದಂಡೆ ಯೋಜನೆಯ, ಶ್ರೀ ಲಾಲಬಹಾದ್ದೂರ ಶಾಸ್ತ್ರಿ ಜಲಸಂಗ್ರಹಾಗಾರದ ಮಟ್ಟವನ್ನು, 524 ದಶಾಂಶ 2–5–6 ಮೀಟರ್‌ಗೆ ಏರಿಸಿ, ರಾಜ್ಯದ ಪಾಲಿನ, 100 ಟಿ.ಎಂ.ಸಿ. ಅಡಿ ನೀರನ್ನು, ಸಮರ್ಪಕವಾಗಿ ಬಳಸಿಕೊಳ್ಳುವ, ಐತಿಹಾಸಿಕ ಯೋಜನೆಯಡಿ, ಮುಳುಗಡೆ ಸಂತ್ರಸ್ತರ ಹಿತರಕ್ಷಣೆಗೆ, ಸರ್ಕಾರ ಬದ್ಧವಾಗಿದೆ ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಸ್ಪಷ್ಟ ಪಡಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದಲ್ಲಿ, ವಿಶೇಷ ಸಭೆ ನಡೆಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ, ಹಂತ–1 ಮತ್ತು 2ರ ಅಡಿ, ಬಾಕಿ ಉಳಿದಿರುವ ಅರ್ಹ ಫಲಾನುಭವಿಗಳಿಗೆ, ಆದ್ಯತೆಯ ಮೇರೆಗೆ ತಕ್ಷಣ ಪರಿಹಾರ ವಿತರಿಸಬೇಕು ಹಾಗೂ ಹಂತ–3 ರ ವ್ಯಾಪ್ತಿಯಲ್ಲಿ ಸರ್ಕಾರದ ನಿಯಮಾವಳಿಗಳ ಅನ್ವಯ, ನಿಖರವಾದ ಅನುಪಾತದ ಆಧಾರದಲ್ಲಿ, 184 ಗ್ರಾಮಗಳ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸುವಂತೆ, ಅಧಿಕಾರಿಗಳಿಗೆ ಅವರು, ಸೂಚಿಸಿದರು.

<><><>

**'ಸೇವಾ ಸಂಕಲ್ಪ ಅಭಿಯಾನ'**, ಮಾಸಿಕ ಜನಜಾಗೃತಿ ಆಂದೋಲನದ ಹಿನ್ನೆಲೆ, ಆಕಾಶವಾಣಿ ಪ್ರಸ್ತುತ ಪಡಿಸುತ್ತಿರುವ ಸರಣಿಯಲ್ಲಿ ಇಂದು, ವ್ಯಾಪಾರ ವಹಿವಾಟು ಸುಗಮಗೊಳಿಸುವ, 'ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್' ಬಗ್ಗೆ, ಒಂದು ವರದಿ.. 2014 ರಲ್ಲಿ, ಕೇಂದ್ರ ಸರ್ಕಾರ, ವ್ಯಾಪಾರಿಗಳಿಗೆ ತಮ್ಮ ವಹಿವಾಟು ಸುಗಮಗೊಳಿಸಲು, ಸರಳವಾದ, ಹೊಸ ನೋಂದಾವಣಿ, ಜನ ವಿಶ್ವಾಸ ಕಾನೂನು, ಸಣ್ಣಪುಟ್ಟ ಲೋಪಗಳನ್ನು ಅಪರಾಧ ಮುಕ್ತಗೊಳಿಸಿತು. ಕಂಪೆನಿ ಕಾನೂನು, ಸರಳಗೊಂಡಿತು.

2020 ರ ವೇಳೆಗೆ, ಭಾರತ, ವ್ಯಾಪಾರ ವಹಿವಾಟು ಸುಗಮಗೊಳಿಸುವ, ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ ಪರಿಸರ ವ್ಯವಸ್ಥೆಯಲ್ಲಿ, ವಿಶ್ವದಲ್ಲೇ 144 ರಿಂದ, 63ನೇ ಸ್ಥಾನಕ್ಕೆ ಏರಿತು. ಸರಕು ಮತ್ತು ಸೇವಾ ತೆರಿಗೆ ಮೂಲಕ, ರಾಜ್ಯಗಳ ಮೂರು ಹಂತದ ಗಡಿ ತೆರಿಗೆ ಪಾವತಿ ರದ್ದುಗೊಳಿಸಿ, ಏಕರೂಪದ ಪಾವತಿ ವ್ಯವಸ್ಥೆ ಜಾರಿಗೊಳಿಸಿತು. ಗ್ರಾಹಕ ಉತ್ಪನ್ನಗಳ ಸಾಗಣೆಯನ್ನು ಸಕ್ಷಮಗೊಳಿಸಿತು. ಗಡಿಗಳನ್ನು ಇಲ್ಲವಾಗಿಸಿತು. ಹೊಸ ಎಕ್ಸ್‌ಪ್ರೆಸ್ ವೇಗಳು, ಉತ್ತಮ ಹೆದ್ದಾರಿ ರಸ್ತೆಗಳು, ಅತಿ ಕಡಿಮೆ ಅವಧಿಯಲ್ಲಿ ಗಮ್ಯ ತಲುಪುವಂತೆ, ಡಿಜಿಟಲ್ ಪಾವತಿ, ವಹಿವಾಟು, ಸುಂಕದ ಕಟ್ಟೆಗಳಲ್ಲಿ, ಕಾಗದಪತ್ರಗಳ ಬಳಕೆಯನ್ನು ಶೂನ್ಯಕ್ಕಿಳಿಸುವಷ್ಟು, ಸುಗಮಗೊಂಡಿತು.

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಸರಕು ಮತ್ತು ಸೇವಾ ತೆರಿಗೆ,** ಕಂಪೆನಿ ನೋಂದಣಿ ಪ್ರಕ್ರಿಯೆ ಸರಳೀಕರಣ, ದೇಶಾದ್ಯಂತ, ವ್ಯಾಪಾರದ ಕಠಿಣ ನಿಯಮ, ನಿರ್ಬಂಧಗಳನ್ನು ತೆಗೆದುಹಾಕಿ, ಏಕರೂಪದ, ಏಕ ಗವಾಕ್ಷಿ ವ್ಯವಸ್ಥೆ ಜಾರಿಗೊಳಿಸಿ, ಸುಲಭವಾಗಿಸಿದೆ ಎಂದು, ಹಿರಿಯ ಲೆಕ್ಕ ಪರಿಶೋಧಕ, ಬೆಂಗಳೂರಿನ, ಶ್ರೀಕಾಂತ ದೈತೋಟ ಅಭಿಪ್ರಾಯಪಟ್ಟಿದ್ದಾರೆ.

<><><>

**ಶ್ರೀಕಾಂತ ದೈತೋಟ ಧ್ವನಿ – 52 ಸೆಕೆಂದುಗಳು**

<><><>

**ಕನ್ನಡ ಚಿತ್ರರಂಗದ ಹಿರಿಯ ನಟ** ಅನಂತನಾಗ ಅವರಿಗೆ, ಪ್ರತಿಷ್ಠಿತ ದಾದಾಸಾಹೇಬ ಫಾಲ್ಕೆ ಪುರಸ್ಕಾರವನ್ನು, ರಾಷ್ಟ್ರಪತಿ ದ್ರೌಪದಿ ಮುರ್ಮು, ಗುಜರಾತಿನ  ಕೇವಡಿಯಾದ, ಏಕತಾ ನಗರದಲ್ಲಿ ಇಂದು ನಡೆಯಲಿರುವ, ವರ್ಣರಂಜಿತ, 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಪ್ರದಾನಿಸಿ ಗೌರವಿಸಲಿದ್ದಾರೆ. ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ, ಸ್ವರ್ಣ ಕಮಲ ಹಾಗೂ 10 ಲಕ್ಷ ರೂಪಾಯಿ ನಗದು ಬಹುಮಾನ ಒಳಗೊಂಡಿದೆ. ಚಿತ್ರರಂಗದ ವಿವಿಧ ಸಾಧಕರಿಗೆ, ಇಂದು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು, ರಾಷ್ಟ್ರಪತಿ ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

**ಹಿರಿಯ ಸಾಹಿತಿ, ದಿವಂಗತ ಎ.ಎಸ್** ಮೂರ್ತಿರಾವ್ ಅವರ ಕಿರಿಯ ಪುತ್ರ, ಕೃಷಿ ಮತ್ತು ಆಹಾರ ವಿಜ್ಞಾನಿ, ಎ.ಎನ್ ನಾಗರಾಜ, ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿಯ ಭೀಮನಕಟ್ಟೆ ಗ್ರಾಮದಲ್ಲಿ ನಿನ್ನೆ ನಿಧನರಾದರು. ಅವರಿಗೆ 98 ವರ್ಷ ವಯಸ್ಸಾಗಿತ್ತು. ಅಮೇರಿಕದಲ್ಲಿ ಕೃಷಿ ಪದವಿ ಪಡೆದಿದ್ದ ಅವರು, ಆಹಾರ ಮತ್ತು ಆರೋಗ್ಯದ ಕುರಿತು ಬರೆದ ಪುಸ್ತಕಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ.

<><><>

**ಸ್ವಚ್ಛ ಭಾರತ ಮಿ ʼನ್ – ಗ್ರಾಮೀಣ ಯೋಜನೆಯಡಿ,** ರಾಯಚೂರು ಜಿಲ್ಲೆಯಲ್ಲಿ, ಕೆಲ ಅರ್ಹ ಕುಟುಂಬಗಳಿಗೆ ವಯಕ್ತಿಕ ಗೃಹ ಶೌಚಾಲಯಗಳು ದೊರಕಿಲ್ಲ; ಸಮೀಕ್ಷೆ ಕೈಗೊಂಡು, ಮುಂಬರುವ 15 ದಿನಗಳೊಳಗಾಗಿ, ವರದಿ ಸಲ್ಲಿಸುವಂತೆ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಈಶ್ವರ ಕಾಂದೂ, ಗ್ರಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಿರ್ಮಲ ರಾಯಚೂರು ಮೊಬೈಲ್ ಅಪ್ಲಿಕೇಶನ್‌ನಲ್ಲಿ, ಪ್ರತಿಯೊಂದು ಮನೆಗೆ ಸಂಬಂಧಿಸಿದ, ಶೌಚಾಲಯ ಬಳಕೆ ವಿವರ ಕಡ್ಡಾಯವಾಗಿ ದಾಖಲಿಸುವಂತೆ ನಿರ್ದೇಶಿಸಿದರು.

<><><>

**ಗ್ರಾಮೀಣ ಸಮುದಾಯದಲ್ಲಿ ಶುಚಿತ್ವ,** ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸಲು, ಸ್ವಚ್ಛ ಭಾರತ ಮಿ ’ನ್ ಗ್ರಾಮೀಣ ಯೋಜನೆ ಅಡಿ, ಜನ ಜಾಗೃತಿ ಆಂದೋಲನ, ಅಕ್ಟೋಬರ್ 2ರ ಗಾಂಧಿ ಜಯಂತಿ ವರೆಗೆ, ‘ಸ್ವಚ್ಛತೆಯೇ ಸೇವೆ–2026’ ಅಭಿಯಾನ ನಡೆಯಲಿದೆ ಎಂದು, ಕಲಬುರಗಿ ಜಿಲ್ಲಾ ಪಂಚಾಯಿತಿ ಸಿ.ಇ.ಓ, ರಾಹುಲ ಸಂಕನೂರ, ತಿಳಿಸಿದ್ದಾರೆ. ಈ ತಿಂಗಳ 27 ನೇ ತಾರೀಖು, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಹಿನ್ನೆಲೆ, ಸ್ವಚ್ಛತೆಗಾಗಿ ಕ್ರೀಡೆ, ಸ್ವಚ್ಛತಾ ಹಬ್ಬ, ತಾಯಿ ಹೆಸರಿನಲ್ಲಿ ಒಂದು ಗಿಡ ಅಭಿಯಾನ ನಡೆಯಲಿದೆ. ಅಕ್ಟೋಬರ್ 1 ರಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ದಿನ, ಒಂದು ಗಂಟೆ ಸಾಮೂಹಿಕ ಶ್ರಮದಾನ ನಡೆಯಲಿದೆ ಎಂದರು.

<><><>

**5ನೇ ಆವೃತ್ತಿಯ, ‘ಸ್ವಚ್ಛ ಸಾಗರ–ಸುರಕ್ಷಿತ ಸಾಗರ’** ರಾಷ್ಟ್ರೀಯ ಅಭಿಯಾನದ ಅಂಗವಾಗಿ, ಅಂತಾರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನ – 2026 ರ ಜನಾಂದೋಲನದ ಭಾಗವಾಗಿ, ಮಂಗಳೂರಿನ, ತಣ್ಣೀರುಬಾವಿ ಕಡಲತೀರದಲ್ಲಿ, ಸ್ವಚ್ಛತಾ ಅಭಿಯಾನ ಜರುಗಿತು. ನವ ಮಂಗಳೂರು ಬಂದರು ಪ್ರಾಧಿಕಾರದ, ಹಿರಿಯ ಅಭಿಯಂತರ ಬಿ. ಅವಿನಾಶ ಚಾಲನೆ ನೀಡಿ, ಮಾತನಾಡಿ, ಸ್ವಚ್ಛತೆ ಅವಿಭಾಜ್ಯ ಅಂಗವಾಗಬೇಕು. ಕಡಲ ತೀರ ಪರಿಸರದ ಸ್ವಚ್ಛತೆ ನಮ್ಮ ಆದ್ಯತೆ ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಪಶ್ಚಿಮಘಟ್ಟ ಸಂರಕ್ಷಣೆ;** ರಾಜ್ಯ ಸರ್ಕಾರದಿಂದ, ಸಮಗ್ರ ನೀಲನಕ್ಷೆ – ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ.

**ಆಲಮಟ್ಟಿಯ, ಶ್ರೀ ಲಾಲಬಹಾದ್ದೂರ ಶಾಸ್ತ್ರಿ** ಜಲಸಂಗ್ರಹಾಗಾರ; ಕೃಷ್ಣ ಮೇಲ್ದಂಡೆ ಯೋಜನೆ, ಮುಳುಗಡೆ ಸಂತ್ರಸ್ತರ ಹಿತರಕ್ಷಣೆಗೆ, ಸರ್ಕಾರ ಬದ್ಧ – ಸಚಿವ ಎನ್. ಚಲುವರಾಯಸ್ವಾಮಿ.

**ವ್ಯಾಪಾರ ವಹಿವಾಟು** ಸುಗಮಗೊಳಿಸಿದ, ಕೇಂದ್ರದ ಜಿ.ಎಸ್.ಟಿ ನೀತಿ ಹಾಗೂ ಡಿಜಿಟಲ್ ಪಾವತಿ, ವ್ಯವಸ್ಥೆ.

**ಹಿರಿಯ ನಟ, ಅನಂತನಾಗ ಅವರಿಗೆ,** ರಾಷ್ಟ್ರಪತಿಯವರಿಂದ ಇಂದು, ದಾದಾಸಾಹೇಬ ಫಾಲ್ಕೆ ಪುರಸ್ಕಾರ, ಪ್ರದಾನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>